1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ

ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ**. 874/2024**

| | |
|---|---|
| ಹೆಸರುಃ ಮಲ್ಲಿಕಾರ್ಜುನ | ಚಾಸಾಃ 7 |
| ತಂದೆಯ ಹೆಸರುಃ ಈಶ್ವರಪ್ಪ | ಪ್ರಾಸಾ: 3 |
| ವಯಸ್ಸುಃ 43 ವರ್ಷ | |
| ಉದ್ಯೋಗಃ ವ್ಯವಸಾಯ | |
| ವಾಸ ಸ್ಥಳಃ ಮಲ್ಲಿಗೆರೆ ಗ್ರಾಮ ಚನ್ನಗಿರಿ ತಾಃ | |
| ಸಾಕ್ಷಿಗೆ ದಿನಾಂಕಃ 14-01-2026 ರಂದು ಪ್ರಮಾಣ ವಚನ ಭೋಧಿಸಲಾಯಿತು . | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಸ್ಥಳ ಮಹಜರಾಗಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ನನ್ನ ಜೊತೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಯಾರು ಯಾವ ಕಾರಣಕ್ಕಾಗಿ ಬರೆದರು ಎಂದು ನನಗೆ ಗೊತ್ತಿಲ್ಲ.

ಈಗ ನೋಡುತ್ತಿರುವ ಭಾವಚಿತ್ರಗಳಲ್ಲಿ ನಾನು ಇದ್ದೇನೆ. ಸದರಿ ಫೋಟೋಗಳನ್ನು ಈಗಾಗಲೇ ನಿಪಿ-3 ಮತ್ತು 4 ಎಂದು ಗುರುತಿಸಲಾಗಿದೆ. ಅದಕ್ಕೆ ಪೊಲೀಸರ ಕೋರಿಕೆ ಮೇರೆಗೆ ನಿಂತಿರುತ್ತೇನೆ. ಸದರಿ ಭಾವಚಿತ್ರಗಳನ್ನು ಯಾರು ಯಾವ ಕಾರಣಕ್ಕಾಗಿ ತೆಗೆದರು ಎಂದು ನನಗೆ ಗೊತ್ತಿಲ್ಲ.

ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ಕಚ್ಚಾನಕಾಶೆಯಾಗಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.9 (ಎ) ಎಂದು ಗುರುತಿಸಲಾಯಿತು. ಅದು ಯಾವ ದಾಖಲೆ ಎಂದು ನನಗೆ ಗೊತ್ತಿಲ್ಲ, ಸದರಿ ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ನನ್ನ

ಜೊತೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಯಾರು ಯಾವ ಕಾರಣಕ್ಕಾಗಿ ಬರೆದರು ಎಂದು ನನಗೆ ಗೊತ್ತಿಲ್ಲ.

ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ವಾಹನ ತಡೆ ಮಹಜರಾಗಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.10 (ಎ) ಎಂದು ಗುರುತಿಸಲಾಯಿತು. ಅದು ಯಾವ ದಾಖಲೆ ಎಂದು ನನಗೆ ಗೊತ್ತಿಲ್ಲ, ಸದರಿ ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ನನ್ನ ಜೊತೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಏನನ್ನು ವಶಪಡಿಸಿಕೊಂಡಿರುವುದಿಲ್ಲ. ಯಾರು ಯಾವ ಕಾರಣಕ್ಕಾಗಿ ಬರೆದರು ಎಂದು ನನಗೆ ಗೊತ್ತಿಲ್ಲ.

ಈಗ ನೋಡುತ್ತಿರುವ ಭಾವಚಿತ್ರಗಳಲ್ಲಿ ನಾನು ಇದ್ದೆನೆ. ಸದರಿ ಫೋಟೋಗಳನ್ನು ನಿಪಿ-11 ಮತ್ತು 12 ಎಂದು ಗುರುತಿಸಲಾಗಿದೆ. ಅದಕ್ಕೆ ಪೊಲೀಸರ ಕೋರಿಕೆ ಮೇರೆಗೆ ನಿಂತಿರುತ್ತೇನೆ. ಸದರಿ ಭಾವಚಿತ್ರಗಳನ್ನು ಯಾರು ಯಾವ ಕಾರಣಕ್ಕಾಗಿ ತೆಗೆದರು ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ನಿಪಿ-2 ಮತ್ತು 10 ಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು,ನಿಪಿ-2 ಮತ್ತು 10 ನ್ನು ನೋಡಲಾಗಿ ಸಾಕ್ಷಿಯು ನಿಪಿ-2 ಮತ್ತು 10 ಕ್ಕೆ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

<u>**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**</u>

ದಿಃ 22-07-2022 ರಂದು ಚಾಸಾ1ರವರು ತೋರಿಸಿದಸ್ಥಳದಲ್ಲಿ ನನ್ನ ಹಾಗೂ ಚಾಸಾ-6ರವರ ಸಮಕ್ಷಮ ಸಂಜೆ 5.00 ರಿಂದ 6.00 ವರೆಗೆ ನಿಪಿ-2 ರಂತೆ ಪಂಚನಾಮೆ ಜರುಗಿಸಿ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ, ಸದರಿ ಸಮಯಕ್ಕೆ ನಿಪಿ-3 ಮತ್ತು 4ರಂತೆ ಪೊಟೋ ತೆಗೆರದುನಿಪಿ-9 ರಂತೆ ಕಚ್ಚಾ ನಕಾಶೆಯನ್ನು ತಯಾರಿಸಿ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ಅದೇ ದಿನ ಠಾಣಾ ಅವರಣದಲ್ಲಿ ನನ್ನ ಹಾಗೂ ಚಾಸಾ- 6ರವರ ಸಮಕ್ಷಮ ನಿಪಿ-10 ರಂತೆ ಕೆಎ-17-ಎಎ-3054 ಗೂಡ್ಸ್ ಆಟೋವನ್ನು ತಡೆಹಿಡಿದು ಸಂಜೆ 6.05 ರಿಂದ 6.30ರವರೆಗೂ ಪಂಚನಾಮೆ ಜರುಗಿಸಿ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ, ಸದರಿ ಸಮಯಕ್ಕೆ ನಿಪಿ11 ಮತ್ತು 12 ರಂತೆ ಫೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ,

ಎಲ್ಲಾ ವಿಚಾರ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದಃ ಇರುವುದಿಲ್ಲ,**

**ಮರು ವಿಚಾರಣೆಃ ಇರುವುದಿಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)** **ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ**. 874/2024**

| | |
|---|---|
| ಹೆಸರುಃ ನಾಗರಾಜಪ್ಪ | ಚಾಸಾಃ 3 |
| ತಂದೆಯ ಹೆಸರುಃ ಕಲ್ಲೇಶಪ್ಪ | ಪ್ರಾಸಾ: 2 |
| ವಯಸ್ಸುಃ 46 ವರ್ಷ | |
| ಉದ್ಯೋಗಃ ವ್ಯವಸಾಯ | |
| ವಾಸ ಸ್ಥಳಃ ಮಲ್ಲಿಗೆರೆ ಗ್ರಾಮ ಚನ್ನಗಿರಿ ತಾಃ | |
| ಸಾಕ್ಷಿಗೆ ದಿನಾಂಕಃ 14-01-2026 ರಂದು ಪ್ರಮಾಣ ವಚನ ಭೋಧಿಸಲಾಯಿತು . | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನನಗೆ ಈ ಪ್ರಕರಣದ ಕುರಿತುಯಾವುದೇ ಮಾಹಿತಿ ಇಲ್ಲ. ಯಾವುದೇ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ. ಯಾವುದೇ ಹೇಳಿಕೆಕೊಟ್ಟಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಹೇಳಿಕೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ಹೇಳಿಕೆಯನ್ನು ನೋಡಲಾಗಿ ಸಾಕ್ಷಿಯು ಹೇಳಿಕೆಗೆ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ದಿಃ 20-07-2022 ರಂದು ನಾನು ಯೂನಸ್ ಟ್ರೇಡರ್ ಅಂಗಡಿ ಬಳಿ ಇದ್ದು, ಚಾಸಾ1ರವರು ಮನೆಕಟ್ಟಿಸುತ್ತಿದ್ದು ಸಾಮಾನುಗಳನ್ನು ಕೆಎ-17-ಎಎ-3054 ಗುಡ್ಸ್ ಆಟೋದಲ್ಲಿ ಲೋಡ್ ಮಾಡಿಕೊಂಡ ಸಂಜೆ 7.30ರ ಸಮಯಕ್ಕೆ ಅಟೋ ಚಾಲಕ ಶಿವಕುಮಾರ ತನ್ನ ಆಟೋವನ್ನು ಸ್ಟಾರ್ಟ್ ಮಾಡಿ ಸ್ವಲ್ಪ ದಿಬ್ಬ ಇದ್ದ ಕಾರಣ ಆಟೋವನ್ನು

ಚಾಲಕ ಜೋರಾಗಿ ಎಕ್ಸ್ ಲೇಟರ್ ಕೊಟ್ಟ ಕಾರಣ ಆಟೋ ಪಕ್ಕ ನಿಂತಿದ್ದ ರವಿಕುಮಾರನಮೇಲೆ ಪಲ್ಟಿಯಾಗಿ ಬಿದಿದ್ದು --------------------------------------- ನಾನು ಆಟೋ ಚಾಲಕನನ್ನುನ ನೋಡಿದರೆ ಗುರುತಿಸುತ್ತೇನೆ. ಎಂದುದಿಃ 21-07-2022 ರಂದುಹೇಳಿಕೆ ನೀಡಿರುತ್ತೆನೆ ಎಂದರೆ ಸರಿಯಲ್ಲ, ಸಾಕ್ಷಿಯಅಲ್ಲಗಳೆದಹೇಳಿಕೆಯನ್ನು ನಿಪಿ-8 ಎಂದುಗುರುತಿಸಲಾಯಿತು.

ಎಲ್ಲಾ ವಿಚಾರ ಗೊತ್ತಿದ್ದರು ಸಹ ಆರೋಪಿಗೆಸ ಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದಃ ಇರುವುದಿಲ್ಲ,**

**ಮರು ವಿಚಾರಣೆಃ ಇರುವುದಿಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)** **ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ**. 33/2024**

| | |
|---|---|
| ಹೆಸರುಃ ಮಹಮ್ಮದ್ ಖಾಜಾ | ಚಾಸಾಃ 3 |
| ತಂದೆಯ ಹೆಸರುಃ ಮಹಮ್ಮದ್ ಉಸ್ಮಾನ್ | ಪ್ರಾಸಾ: 3 |
| ವಯಸ್ಸುಃ 43 ವರ್ಷ | |
| ಉದ್ಯೋಗಃ ಗಾರೆ ಕೆಲಸ | |
| ವಾಸ ಸ್ಥಳಃ ಚನ್ನಗಿರಿ | |
| ಸಾಕ್ಷಿಗೆ ದಿನಾಂಕಃ 04-10-2025 ರಂದು ಪ್ರಮಾಣ ವಚನ ಭೋಧಿಸಲಾಯಿತು . | |

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಕೃತ್ಯ ನಡೆದ ಸ್ಥಳದ ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 2021ರಲ್ಲಿ ಮಾವಿನಕಟ್ಟೆ ದೊಂಡರಘಟ್ಟ ಗ್ರಾಮದ ಚೆನ್ನೆನಹಳ್ಳಿ ಕ್ರಾಸ್ ಬಳಿ ಅಪಘಾತವಾದ ವಿಚಾರವಾಗಿ ಮಾಡಿರುತ್ತೇನೆ. ಸದರಿ ಸಮಯಕ್ಕೆ ನನ್ನೊಂದಿಗೆ ಪೊಲೀಸರು, ಚಾಸಾ-1,2 ಹಾಜರಿದ್ದೆವು. ಸದರಿ ಮಹಜರನ್ನು ಬೆಳಿಗ್ಗೆ 10.00 ರಿಂದ 11.00 ರವರೆಗೆ ಜುರುರಿಸಿತೂತ್ರೆ. ಸದರಿ ಮಹಜರಿಗೆ ನನ್ನೊಂದಿಗೆ ಚಾಸಾ-1ಮತ್ತು 2 ರವರು ಸಹಿ ಮಾಡಿರುತ್ತಾರೆ.

ಸದರಿ ಸಮಯಕ್ಕೆ ಪೊಲೀಸರು ಒಂದು ಪೊಟೋವನ್ನು ತೆಗೆದಿರುತ್ತಾರೆ. ಸಾಕ್ಷಿ ಕಡತದಲ್ಲಿ ಪೊಟೋವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ವಾಹನಗಳ ತಡೆ ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ-6 ಎಂದು

ಗುರುತಿಸಲಾಗಿದ್ದು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು. ಸರಿದ ದಾಹಲೆಗೆ ನಾನು ಸಹಿಯನ್ನು ನಾನು 2021ರಲ್ಲಿ ಚನ್ನಗಿರಿಯ ಪೊಲೀಸ್ ಕ್ವಾರ್ಟಸ್ ನ ಕಾಂಪೌಂಡ್ ಬಳಿ ಮಾಡಿರುತ್ತೇನೆ. ಸದರಿ ಸಮಯಕ್ಕೆ ನನ್ನೊಂದಿಗೆ ಚಾಸಾ-2,9 ರವರು ಹಾಜರಿದ್ದು ಸದರಿ ನಿಪಿ-6ನ್ನು ಬೆಳಿಗ್ಗೆ 11.00 ಗಂಟೆಗೆ ಜರುಗಿಸಿರುತ್ತಾರೆ. ನಮ್ಮಗಳ ಸಮಕ್ಷಮ ಟ್ರಾಕ್ಟರ್ ಮತ್ತು ಬೈಕ್ ಗಳ ಕುರಿತು ಪಂಚನಾಮೆ ಜರುಗಿಸಿರುತ್ತಾರೆ. ಸದರಿ ವಾಹನಗಳ ಸಂಖ್ಯೆ ನನಗೆ ಹೇಳಲಾಗುವುದಿಲ್ಲ. ಸದರಿ ನಿಪಿ-6 ಕ್ಕೆ ಚಾಸ-2 ಮತ್ತು 9 ರವರು ಸಹಿ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ,

ಈಗ ನೋಡುತ್ತಿರುವ ಫೋಟೋಗಳಲ್ಲಿ ನಾನು ಇದ್ದೇನೆ, ಸದರಿ ಫೋಟೋವನ್ನು ನಿಪಿ6ರ ದಿನಾಂಕದಂದೇ ತೆಗೆಯಲಾಗಿರುತ್ತದೆ, ಸದರಿ ಫೋಟೋಗಳನ್ನು ಈಗಾಗಲೇ ನಿಪಿ-4 ಮತ್ತು 5 ಎಂದು ಗುರುತಿಸಲಾಗಿದೆ.

**(ಈ ಹಂತದಲ್ಲಿ ಸಾಕ್ಷಿಯು ನಿಪಿ-2 ಮತ್ತು 6 ರ ಪಂಚನಾಮೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ನಿಪಿ-2 ಮತ್ತು 6 ರ ಪಂಚನಾಮೆಯನ್ನು ನೋಡಲಾಗಿ ಸಾಕ್ಷಿಯು ನಿಪಿ-2 ಮತ್ತು 6 ರ ಪಂಚನಾಮೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ದಿಃ 15-11-2021 ರಂದು ದೊಂಡರಘಟ್ಟ ಗ್ರಾಮದ ಎನ್ ಹೆಚ್-13ರ ರಸ್ತೆಯ ಉತ್ತರದ ಅಂಚಿನಲ್ಲಿ ನಿಪಿ-2 ರಂತೆ ಪಂಚನಾಮೆ ಜರುಗಿಸಿದರು ಎಂದರೆ ಸರಿ.

ದಿಃ 26-12-2021 ರಂದು ಪೊಲೀಸ್ ವಸತಿ ಗೃಹದ ಬಳಿ ನೊಂದಣಿ ಸಂಖ್ಯೆ ಇಲ್ಲದ ಟ್ರಾಕ್ಟರ್ ಟ್ರಾಲಿ ಮತ್ತು ಕೆಎ-16/ಇಡಿ/3018ರ ಹಿರೋ ಪ್ಯಾಶನ್ ಪ್ರೋ ಬೈಕ್ ನ್ನು ನಮ್ಮ ಸಮಕ್ಷಮ ತಡೆ ಹಿಡಿದು ಅಮಾನತುಪಡಿಸಿಕೊಂಡರು ಎಂರೆ ಸರಿ. ಸದರಿ ಪಂಚನಾಮೆಯನ್ನು ಬೆಳಿಗ್ಗೆ 10.00 ರಿಂದ 11.00 ರವರೆಗೆ ಜರುಗಿಸಿರುತ್ತಾರೆ ಎಂದರೆ ಸರಿ.

**<u>ಪಾಟಿ ಸವಾಲುಃ ಆರೋಪಿ ಪರ ಶ್ರೀ ಎನ್ ಆರ್ ವಕೀಲರಿಂದಃ</u>**

ನನಗ ಕನ್ನಡ ಓದಲು ಬರೆಯಲು ಬರುವುದಿಲ್ಲ, ನಾನು ಗಾರೆ ಕೆಲಸ ಮಾಡುತ್ತೇನೆ. ಚಾಸಾ-1, 2, 4, 8 ಮತ್ತು 9 ರವರು ನನ್ನ ಸಂಬಂಧಿಕರು ಎಂದರೆ ಸರಿ. ನಿಪಿ-2 ನ್ನು ಜರುಗಿಸಲು ನನ್ನನ್ನು ಪೊಲೀಸರು ಕರೆದಿರುತ್ತಾರೆ, ಸದರಿ ಸಮಯಕ್ಕೆ ನಾನು ಮನೆಯ ಬಳಿ ಇದ್ದೆ. ಸಾಕ್ಷಿ ಮುಂದುವರೆದು ಚಾಸಾ-9ರವರು ಕರೆದಿರುತ್ತಾರೆ ಎಂದು ನುಡಿಯುತ್ತಾರೆ. ಚಾಸಾ-9 ರವರು ನನ್ನನು ಕರೆದಾಗ ಬೆಳಿಗ್ಗೆ 9.30 ಗಂಟೆ ಆಗಿರುತ್ತದೆ. ನಾನು ಚಾಸಾ-1,2 ರವರು ಜೊತೆಯಾಗಿ ದೊಂಡರಘಟ್ಟಕ್ಕೆ ಸುಮಾರು 10.30 ಯಿಂದ 11.00 ಗಂಟೆಗೆ ಹೋಗಿರುತ್ತೇವೆ. ಸದರಿ ಸ್ಥಳದಲ್ಲಿ ನನ್ನೊಂದಿಗೆ ಬಹಳಷ್ಟು ಜನ ಹಾಜರಿದ್ದು ಅವರ ವಿವರ ನನಗೆ ಹೇಳಲಾಗುವುದಿಲ್ಲ. ಪೊಲೀಸರು ನಿಪಿ-2 ನ್ನು ಜರುಗಿಸಲು ನನಗೆ ಯಾವುದೇ ನೋಟಿಸನ್ನು ಜಾರಿಮಾಡಿಲ್ಲ. ನಿಪಿ-2ರಲ್ಲಿ ವಿವರ ನನಗೆ ಗೊತ್ತಿಲ್ಲ. ನಿಪಿ-2 ಕ್ಕೆ ನಾನು ಪೊಲೀಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ-2ನ್ನು ಬರೆಯಲು ನಾನು ಮಾಹಿತಿ ನೀಡಿಲ್ಲ.

ನಿಪಿ-6ರ ಸಮಯಕ್ಕೆ ನನ್ನೊಂದಿಗೆ ಚಾಸಾ-2,9, ಮತ್ತು ಪೊಲೀಸರು ಹಾಜರಿದ್ದರು. ಸದರಿ ನಿಪಿ-6ರ ನಿರ್ದಿಷ್ಟ ದಿನಾಂಕ ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ.ನಿಪಿ-6ನ್ನು ಜರುಗಿಸಲು ನಮಗೆ ಯಾವುದೇ ನೋಟಿಸನ್ನು ಜಾರಿಮಾಡಿಲ್ಲ ಎಂದರೆ ಸರಿ. ನಿಪಿ-2ರಲ್ಲಿ ವಿವರ ನನಗೆ ಗೊತ್ತಿಲ್ಲ ಎಂದರೆ ಸರಿ.ಹಾಗಾಗಿ ನಿಪಿ-2 ಮತ್ತು 6 ರಲ್ಲಿನ ವಿಚಾರ ನನಗೆ ಗೊತ್ತಿಲ್ಲದೆ ಇದ್ದರು ನನಗೆ ಚಾಸಾ-1,2,4 8 ಮತ್ತು 9 ರವರು ನನ್ನ ಸಂಬಧಿಕರಾದಕಾರಣ ಅವರ ಪರವಾಗಿ ನಾನು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ, ನಾನು ಹೇಳಿದಂತೆ ನಿಪಿ-2 ಮತ್ತು 6 ನ್ನು ಸ್ಥಳದಲ್ಲಿ ಜರುಗಿಸದೇ ಇದ್ದರು ಸಹ ಮತ್ತು ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ, ನಾನು ಪೊಲೀಸರ ಕೋರಿಕೆ ಮೇರೆಗೆ ಈ ಪ್ರಕರಣದಲಿಲ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)** **ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ

ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ**. 33/2024**

| | |
|---|---|
| ಹೆಸರುಃ ನಜೀರ್ | ಚಾಸಾಃ 2 |
| ತಂದೆಯ ಹೆಸರುಃ ಹಮೀರ್ ಸಾಬ್ | ಪ್ರಾಸಾ: 2 |
| ವಯಸ್ಸುಃ 45 ವರ್ಷ | |
| ಉದ್ಯೋಗಃ ಹೂವಿನ ವ್ಯಾಪಾರ | |
| ವಾಸ ಸ್ಥಳಃ ಚನ್ನಗಿರಿ | |
| ಸಾಕ್ಷಿಗೆ ದಿನಾಂಕಃ 04-10-2025 ರಂದು ಪ್ರಮಾಣ ವಚನ ಭೋಧಿಸಲಾಯಿತು . | |

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಕೃತ್ಯ ನಡೆದ ಸ್ಥಳದ ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಶಿವಮೊಗ್ಗ ರಸ್ತೆಯ ಬಳಿ ಮಾಡಿರುತ್ತೇನೆ.

ಈಗ ನೋಡುತ್ತಿರುವ ಫೋಟೋದಲ್ಲಿ ನಾನು ಇದ್ದೇನೆ ಅದನ್ನು ನಿಪಿ-2ರ ಸಮಯದಲ್ಲಿ ಅಪಘಾತವಾದ ಸ್ಥಳದಲ್ಲಿ ಪೊಲೀಸರು ತೆಗೆದಿರುತ್ತಾರೆ, ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ವಾಹನಗಳ ತಡೆ ಪಂಚನಾಮೆಯಾಗಿದ್ದು ಅದನ್ನು ನಿಪಿ-6 ಎಂದು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಏನನ್ನು ವಶಕ್ಕೆ ಪಡೆದಿಲ್ಲ, ನನ್ನೊಂದಿಗೆ ಬೇರೆ ಯಾರು ಹಾಜರಿದ್ದರು ಎಂದು ನನಗೆ ಹೇಳಲಾಗುವುದಿಲ್ಲ. ಈಗ ನೋಡುತ್ತಿರುವ ಪೊಟೋಗಳಲ್ಲಿನಾನು ಇದ್ದೇನೆ, ಸದರಿ ಪೊಟೋವನ್ನು ಯಾವ ಕಾರಣಕ್ಕಾಗಿ

ತೆಗೆದರು ಎಂದು ಗೊತ್ತಿಲ್ಲ. ಪೊಲಿಸೇರ ಕೋರಿಕೆ ಮೇರೆಗೆ ಸದರಿ ಪೊಟೋಗಳಿಗೆ ನಿಂತಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯು ನಿಪಿ-2 ಮತ್ತು 6 ರ ಪಂಚನಾಮೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ನಿಪಿ-2 ಮತ್ತು 6 ರ ಪಂಚನಾಮೆಯನ್ನು ನೋಡಲಾಗಿ ಸಾಕ್ಷಿಯು ನಿಪಿ-2 ಮತ್ತು 6 ರ ಪಂಚನಾಮೆಗೆ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**<u>ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>**

ದಿಃ 15-11-2021 ರಂದು ಚಾಸಾ-1ರವರು ತೋರಿಸಿದ ಸ್ಥಳದಲ್ಲಿ ನನ್ನ ಹಾಗೂ ಚಾಸಾ- 3 ರವರ ಸಮಕ್ಷಮ ಬೆಳಿಗ್ಗೆ 10.00 ರಿಂದ 11.00 ರವರೆಗೂ ನಿಪಿ-2 ರಂತೆ ಮಹಜರು ಜರುಗಿಸಿ ಅದಕ್ಕೆ ನಾನು ಚಾಸಾ- 1 ಮತ್ತು 3 ರವರ ಸಹಿ ಮಾಡಿರುತ್ತೇವೆ ಎಂದರೆ ಸರಿ. ಸದರಿ ನಿಪಿ-3 ನ್ನು ನಿಪಿ-2ರ ಸಮಯಕ್ಕೆ ತೆಗೆಯಲಾಗಿದೆ ಎಂದರೆ ಸರಿ.

ದಿಃ 26-12-2021 ರಂದು ಪೊಲೀಸ್ ವಸತಿ ಗೃಹದ ಬಳಿ ನೊಂದಣಿ ಸಂಖ್ಯೆ ಇಲ್ಲದ ಟ್ರಾಕ್ಟರ್ ಟ್ರಾಲಿ ಮತ್ತು ಕೆಎ-16/ಇಡಿ/3018ರ ಹಿರೋ ಪ್ಯಾಶನ್ ಪ್ರೋ ಬೈಕ್ ನ್ನು ನಮ್ಮ ಸಮಕ್ಷಮ ತಡೆ ಹಿಡಿದು ಅಮಾನತುಪಡಿಸಿಕೊಂಡರು ಎಂರೆ ಸರಿ. ಸದರಿ ಪಂಚನಾಮೆಯನ್ನು ಬೆಳಿಗ್ಗೆ 10.00 ರಿಂದ 11.00 ರವರೆಗೆ ಜರುಗಿಸಿರುತ್ತಾರೆ ಎಂದರೆ ಸರಿ.

**<u>ಪಾಟಿ ಸವಾಲುಃ ಆರೋಪಿ ಪರ ಶ್ರೀ ಎನ್ ಆರ್ ವಕೀಲರಿಂದಃ</u>**

ಆರೋಪಿ ಪರವಾಗಿ ಯಾವುದೇ ಪಾಟೀ ಸವಾಲು ಇಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇರುವುದಿಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ

ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ**. 33/2024**

| | |
|---|---|
| ಹೆಸರುಃ ಮಹಮ್ಮದ್ ಖಲಂದರ್ | ಚಾಸಾಃ 1 |
| ತಂದೆಯ ಹೆಸರುಃ ಮಹಮ್ಮದ್ ಜಾವೀದ್ | ಪ್ರಾಸಾ: 1 |
| ವಯಸ್ಸುಃ 26 ವರ್ಷ | |
| ಉದ್ಯೋಗಃ ಸಾಮಿಲ್ ನಲ್ಲಿ ಕೆಲಸ | |
| ವಾಸ ಸ್ಥಳಃ ಚನ್ನಗಿರಿ | |
| ಸಾಕ್ಷಿಗೆ ದಿನಾಂಕಃ 06-09-2025 ರಂದು ಪ್ರಮಾಣ ವಚನ ಭೋಧಿಸಲಾಯಿತು . | |

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಚಾಸಾ-4 ನನ್ನ ಸ್ನೇಹಿತ.

ಚೆನ್ನನಹಳ್ಳಿ ಸರ್ಕಲ್ ಬಳಿ ನಾನು , ಚಾಸಾ-4, ಮತ್ತು 3ನೇ ಆರೋಪಿ ನಿಂತಿದ್ದಾಗ ಟ್ರಾಕ್ಟರ್ ಬಂದು ಅಪಘಾತಪಡಿಸಿರುತ್ತದೆ. ಸದರಿ ಅಪಘಾತದಿಂದ ನನ್ನ ಎಡ ಗೈ ಮುರಿದಿರುತ್ತದೆ. 3ನೇ ಅರೋಪಿ ಸಲೀಂ ಮತ್ತು ಚಾಸಾ-4 ರವರು ತೀವ್ರ ಗಾಯಗೊಂಡು ಕೋಮಾ ಸ್ಥಿತಿಗೆ ತಲುಪಿರುತ್ತಾರೆ. ನಂತರ ನಮ್ಮನ್ನು ಸರ್ಕಾರಿ ಆಸ್ಪತ್ರೆಗೆ ಆಂಬ್ಯೂಲೆನ್ಸ್ ನಲ್ಲಿ ಕರೆತಂದಿರುತ್ತಾರೆ. ಅಲ್ಲಿಂದ ಶಿವಮೊಗ್ಗದ ಮ್ಯಾಕ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ, ಸದರಿ ಆಸ್ಪತ್ರೆಗೆ ಪೊಲಸರು ವಿಚಾರಣೆಗೆ ಬಂದಿದ್ದು ನಾನು ಇದ್ದ ಮಾಹಿತಿಯನ್ನು ತಿಳಿಸಿರುತ್ತೇನೆ. ನಾನು ಹೇಳಿದಂತೆ ಪೊಲೀಸರು ನನ್ನ ಹೇಳಿಕೆಯ ದೂರನ್ನು ಪಡೆದಿರುತ್ತಾರೆ. ಸಾಕ್ಷಿ ಕಡತದಲ್ಲಿನ ಸದರಿ ಹೇಳಿಕೆಯ ದೂರನ್ನುನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು .

ಸದರಿ ನಿಪಿ-1 ದೂರಿನ ಹಿನ್ನೆಲೆಯಲ್ಲಿ ಪೊಲೀಸರು 4-5 ದಿನಗಳ ತರುವಾಯ ಘಟನಾ ಸ್ಥಳಕ್ಕೆ ಬಂದು ಮಹಜರನ್ನು ಜರುಗಿಸಿರುತ್ತಾರೆ ನಿರ್ದಿಷ್ಟ ದಿನಾಂಕ ನನಗೆ ಹೇಳಲಾಗುವುದಿಲ್ಲ. ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ

ದಾಖಲೆ ಪಂಚನಾಮೆಯಾಗಿದ್ದು ಅದನ್ನು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಮಹಜರನ್ನು ಮದ್ಯಾಹ್ನ 12.00 ರಿಂದ 1.00 ಗಂಟೆವರೆಗೆ ಜರುಗಿಸಿರುತ್ತಾರೆ,. ಸದರಿ ಸಮಯಕ್ಕೆ ನನ್ನೊಂದಿಗೆ ಚಾಸಾ-2 ಮತ್ತು 3 ರವರು ಹಾಜರಿದ್ದು ಸಹಿ ಮಾಡಿರುತ್ತಾರೆ.

ಈಗ ನೋಡುತ್ತಿರುವ ಫೋಟೋದಲ್ಲಿ ನಾನು ಇದ್ದೆನೆ ಅದನ್ನು ನಿಪಿ-2ರ ಸಮಯದಲ್ಲಿ ತೆಗೆಯಲಾಗಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

ನಮಗೆ ಅಪಘಾತಪಡಿಸಿದ ಟ್ರಾಕ್ಟರ್ ನಂ ನನಗೆ ಹೇಳಲಾಗುವುದಿಲ್ಲ, ಅದರ ಚಾಲಕನ ಬಗ್ಗೆ ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ದೂರು, ಪಂಚನಾಮೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ದೂರು, ಪಂಚನಾಮೆಯನ್ನು ನೋಡಲಾಗಿ ಸಾಕ್ಷಿಯು ದೂರು, ಪಂಚನಾಮೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**<u>ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>**

ದಿಃ08-11-2021ರಂದು ನಾನು 3ನೇ ಅರೋಪಿ ಮತ್ತು ಚಾಸಾ-4 ರವರೊಂದಿಗೆ ಕೆಎ-16/ಇಡಿ-3018 ನೊಂದಣಿಯ ಬೈಕ್ ನ್ನು ತೆಗೆದುಕೊಂಡು ಮರಕೊಯ್ಯುವ ಮಿಷಿನ್ ನ್ನು ತರಲು ಆಗರದಹಳ್ಳಿ ಗ್ರಾಮಕ್ಕೆ ಹೋಗಿರುತ್ತೇವೆ ಎಂದರೆ ಸರಿ. ಸದರಿ ಮಿಷನ್ ತೆಗೆದುಕೊಂಡು ಹಿಂದಿರುಗುತ್ತಿರುವಾಗ ಸುಣ್ಣಿಗೆರೆ ಹತ್ತಿರದ ದೊಂದರಘಟ್ಟದ ಹತ್ತಿರ ಹೊಲದಿಂದ ಬಂದ ಟ್ರಾಕ್ಟರ್ ನಮ್ಮ ಬೈಕಿಗೆ ಅಡ್ಡ ಬಂದ ಕಾರಣ ನಮ ಬೈಕ್ ಟ್ರಾಕ್ಟರ್ ನ ಇಜಿನ್ ಹತ್ತಿರ ಡಿಕಿಪಡಿಸಿದ್ದರಿದ ಸದರಿ ಬೈಕ್ ಚಾಲನೆ ಮಾಡುತ್ತಿದ್ದ 3ನೇ ಅರೋಪಿಯ ತಲೆಗೆ ಕಾಲಿಗೆ ಗಾಯವಾಗಿದ್ದು ಚಾಸಾ-4 ರವರಿಗೆ ತಲೆ ಕಾಲು ಮತ್ತು ಕೈ ಗೆ ಮತ್ತು ನನಗೆ ಎಡಗೈ ಎಡಗಾಲು ಮತ್ತು ಸೊಂಟಕ್ಕೆ ಪೆಟ್ಟಾಗಿರು ತ್ತದೆ ಎಂದರೆ ಸರಿ. ತಕ್ಷಣ ಯಾರೋ ಗ್ರಾಮಸ್ಥರು ನಮ್ಮನ್ನು ಆಸ್ಪತ್ರೆಗೆ ದಾಖಲಿಸಿದ್ದರು ಎಂದರೆ ಸರಿ. ಸದರಿ ಅಪಘಾತ 3.20 ಕ್ಕೆ ಆಗಿರುತ್ತದೆ ಎಂದರೆ ಸರಿ. ಸದರಿ ಅಪಘಾತ ಟ್ರಾಕ್ಟರ್ ಚಾಲಕನ ತಪ್ಪಿನಿಂದ ಅಗಿದ್ದು ಆತನ ವಿರುದ್ದ ಕಾನೂನು ಕ್ರಮ

ಕೈಗೊಳ್ಳುವಂತೆ ನಾನು ದಿಃ10-11-2021 ರಂದು ನಿಪಿ-1 ರಂತೆ ಪೊಲೀಸರಿಗೆ ಹೇಳಿಕೆಯ ದೂರನ್ನು ನೀಡಿರುತ್ತೇನೆ ಎಂದರೆ ಸರಿ.

ನಂತರ ನಿಪಿ-1ರ ಹಿನ್ನೆಲೆಯಲ್ಲಿ ಪೊಲೀಸರು ನಾನು ತೋರಿಸಿದ ಸ್ಥಳದಲ್ಲಿ ದಿಃ 15-11-2021 ರಂದು ಚಾಸಾ-2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 1000 ರಿಂದ 11.00 ರವರೆಗೂ ನಿಪಿ-2 ರಂತೆ ಮಹಜರು ಜರುಗಿಸಿ ಅದಕ್ಕೆ ಚಾಸಾ-2 ಮತ್ತು 3 ರವರ ವತ್ತು ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿ. ಸದರಿ ದಿನಾಂಕಂದು ನಮಗೆ ಅಪಘಾತಪಡಿಸಿದ ಟ್ರಾಕ್ಟರ್ನ ಟ್ರೇಲರಿ ನೊಂದಣಿ ಸಂಖ್ಯೆ ಇಲ್ಲದ್ದಾಗಿದ್ದು ಅದು 1ನೇ ಆರೋಪಿಯ ಬಾಬ್ತಾಗಿರುತ್ತದೆ ಎಂದರೆ ಸರಿ.

ಸದರಿ ದಿನಾಂಕದಂದು 3ನೇ ಅರೋಪಿಯ ಚಲಾಯಿಸುತ್ತಿದ್ದ ಬೈಕ್ ನ್ನು ಮತ್ತು ನಮಗೆ ಅಪಘಾತಪಡಿಸಿದ ಟ್ರೇಲರ್ ನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಕಡತದಲ್ಲಿನ ಸದರಿ ಬೈಕ್ ಮತ್ತು ಟ್ರಾಕ್ಟರ್ ನ ಟ್ರಾಲೇರ್ ನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು. ನಮಗೆ ಅಪಘಾತಪಡಿಸಿದ ವಿಜಯಕುಮಾರ್ ಎಂಬ ವ್ಯಕ್ತಿಯನ್ನು ನೋಡಿದರೆ ನನಗೆ ಗುರುತಿಸಲು ಆಗುವುದಿಲ್ಲ.

**(ಅರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ರೂ.200/-ಖರ್ಚಿನೊಂದಿಗೆ ಸಮಯಾವಕಾಶ ನೀಡಲಾಯಿತು)**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)** **ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**

**ಸಾಕ್ಷಿಗೆ ದಿನಾಂಕಃ 04-10-2025 ರಂದು ಪ್ರಮಾಣ ವಚನ ಭೋಧಿಸಲಾಯಿತು**

**<u>ಪಾಟಿ ಸವಾಲುಃ ಆರೋಪಿ ಪರ ಶ್ರೀ ಎನ್ ಆರ್ ವಕೀಲರಿಂದಃ</u>**

ನನಗೆ ಕನ್ನಡ ಓದಲು ಬರುವುದಿಲ್ಲ. ನಿಪಿ-1ರಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸದರಿ ದೂರನ್ನು ನಾನು 2021ರ ಆಗಸ್ಟ್ ತಿಂಗಳಿನಲ್ಲಿ ದಾಖಲಿಸಿರುತ್ತೇನೆ. ಚನ್ನಗಿರಿಯಿಂದ ಶಿವಮೊಗ್ಗಕ್ಕೆ ಹೋಗುವ ರಸ್ತೆ ರಾಷ್ಟ್ರೀಯ

ಹೆದ್ದಾರಿ ರಸ್ತೆ ಎಂದರೆ ಸರಿ. ಸದರಿ ರಸ್ತೆ 100 ಅಡಿ ಅಗಲ ಇದೆ ಎಂದರೆ ಸರಿ. ನಾನು ಆಗರದಹಳ್ಳಿಯಿಂದ ಬೈಕ್ ನಲ್ಲಿ ಬರುತ್ತಿರುವಾಗ ನನ್ನನ್ನು ಸೇರಿ 3 ಜನ ಪ್ರಯಾಣಿಸುತ್ತಿದ್ದೆವು ಎಂದರೆ ಸಾಕ್ಷಿ ನಾನು ಚೆನ್ನೆನ್ನಹಳ್ಳಿ ಕ್ರಾಸ್ ಬಳಿ ನಿಂತಿದ್ದೆ ಎಂದು ನುಡಿಯುತ್ತಾರೆ. ನಾನು ನೀಡಿದ ದೂರಿನಲ್ಲಿ ಸದರಿ ವಿಚಾರವನ್ನು ನಮೂದಿಸಿರುತ್ತೇನೆ.

ಮರ ಕೊಯ್ಯುವ ಮಿಷಿನ್ ಸುಮಾರು 20 ಕೆ ಜಿ ಭಾರವಿರುತ್ತದೆ ಎಂದರೆ ಸಾಕ್ಷಿ 7 ಕೆ ಜಿ ಇರುತ್ತದೆ ಎಂದು ನುಡಿಯುತ್ತಾರೆ. ಚನ್ನಗಿರಿ ಶಿವಮೊಗ್ಗದ ರಸ್ತೆಗೆ ಸಂಪರ್ಕ ಕಲ್ಪಿಸುವ ದೊಂಡರಘಟ್ಟವೂ ಸಹ ನೇರವಾಗಿದೆ ಎಂದರೆ ಸರಿ. ಆಗರದಹಳ್ಳಿ ರಸ್ತೆಯು ನೇರವಾಗಿರುವ ಕಾರಣ 100 ಮೀಟರ್ ದೂರದಲ್ಲಿ ಬರುವ ವಾಹನಗಳು ಕಾಣಿಸುತ್ತವೆ ಎಂದರೆ ಸರಿಯಲ್ಲ. ಸದರಿ ದಿನಾಂಕದಂದು ನಮ್ಮ ಬೈಕ್ ನ್ನು 3ನೇ ಅರೋಪಿಯಾದ ಸಲೀಂ ಎಂಬಾತ ಚಲಾಯಿಸುತ್ತಿದ್ದ ಎಂದರೆ ಸರಿ. ಸದರಿ 3ನೇ ಅರೋಪಿಗೆ ಬೈಕ್ ಚಾಲನೆ ಮಾಡಲು ಡಿ ಎಲ್ ಇರಲಿಲ್ಲ ಎಂದರೆ ಸರಿಯಲ್ಲ. ಆತನಿಗೆ ಚಾಲನಾ ಪರವಾನಿಗೆ ಇಲ್ಲದ ಕಾರಣ ಆತನ ವಿರುದ್ಧವೂ ಸಹ ಈ ಪ್ರಕರಣ ದಾಖಲಾಗಿದೆ ಎಂದರೆ ಸರಿಯಲ್ಲ. ಸದರಿ ದಿನಾಂಕದಂದು 3ನೇ ಅರೋಪಿ ವಾಹನ ಚಲಾಯಿಸುತ್ತಿದ್ದಾಗ ಹೆಲ್ಮೆಟ್ ನ್ನು ಧರಿಸಿರಲಿಲ್ಲ ಎಂದರೆ ಸರಿ. ಸದರಿ ದಿನಾಂಕದಂದು ನಮ್ಮ ಬೈಕ್ ನ್ನು ಚಲಾಯಿಸುತ್ತಿದ್ದ 3ನೇ ಅರೋಪಿ ವಾಹನ ಚಾಲನಾ ಪರವಾನಿಗೆ ಹೊಂದಿಲ್ಲದ ಕಾರಣ ಮತ್ತು ಸದರಿ ಬೈಕ್ ದ್ವಿಚಕ್ರವಾಗಿದ್ದು ಅದರಲ್ಲಿ ನಾವು 3 ಜನ ಪ್ರಯಾಣಿಸುತ್ತಿದ್ದು ನಮ್ಮೊಂದಿಗೆ ಮರವನ್ನು ಕತ್ತರಿಸುವ ಮಿಷಿನ್ ನ್ನು ಸಹ ಕೊಂಡುಯ್ಯುತ್ತಿದ್ದು ನಮ್ಮ ತಪ್ಪಿನಿಂದಲೇ ಸದರಿ ಅಪಘಾತ ಸಂಭವಿಸಿದೆ ಎಂದರೆ ಸರಿಯಲ್ಲ.

ಸದರಿ ರಾಷ್ಟ್ರೀಯ ಹೆದ್ದಾರಿ ರಸ್ತೆಯಲ್ಲಿ ದ್ವಿಚಕ್ರವಾಹನಗಳ ಸಂಚಾರಕ್ಕಾಗಿ 5 ಅಡಿ ರಸ್ತೆಯನ್ನು ಪ್ರತ್ಯೇಕವಾಗಿ ನಿಗದಿಪಡಿಸಲಾಗಿದೆ ಎಂದರೆ ಸರಿ. 3ನೇ ಅರೋಪಿ ಸದರಿ ರಸ್ತೆ ನಿಯಮವನ್ನು ಪಾಲಿಸದೇ ಅತೀ ವೇಗವಾಗಿ ಮತ್ತು ಅಜಾಗರೂಕತೆಯಿಂದ ನಮ್ಮ ಬೈಕ್ ನ್ನು ಚಲಾಯಿಸಿದ್ದ ಕಾರಣ ಸದರಿ ಅಪಘಾತವಾಗಿದೆ ಎಂದರೆ ಸರಿಯಲ್ಲ. ಹಾಗಾಗಿ ಸದರಿ ಅಪಘಾತ ಸಂಭವಿಸಲು ಟ್ರಾಕ್ಟರ್ ನದಾಗಲಿ ಅಥವಾ ಚಾಲಕನದ್ದಾಗಲಿ ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಠಾಣೆಗೆ 3-4 ಬಾರಿ ಹೋಗಿರುತ್ತೇನೆ. ಸದರಿ ಸಮಯದಲ್ಲಿ ಪೊಲೀಸರು ಟ್ರಾಕ್ಟರ್ ನ ಚಾಲಕ ಮತ್ತು ಮಾಲೀಕನನ್ನು ನನಗೆ ತೋರಿಸಿ

ಯಾವುದೇ ದಾಖಲೆಗಳಿಗೆ ನಮ್ಮ ಸಹಿಯನ್ನು ಪಡೆದಿಲ್ಲ ಎಂದರೆ ಸರಿ. ಸದರಿ ಟ್ರಾಕ್ಟರ್ ಯಾರ ಬಾಬ್ತು ಎಂಬ ಬಗ್ಗೆ ನಮಗೆ ಯಾವುದೇ ಮಾಹಿತಿ ನೀಡಿಲ್ಲ ಎಂದರೆ ಸಾಕ್ಷಿ ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ ವ್ಯಕ್ತಿಯದ್ದೇ ಟ್ರಾಕ್ಟರ್ ಎಂದು ತೋರಿಸಿರುತ್ತಾರೆ. ನಿಪಿ-2 ನ್ನು ಜರುಗಿಸಿದ ದಿನಾಂಕ ನನಗೆ ಹೇಳಲಾಗುವುದಿಲ್ಲ. ನನಗೆ  ನಿಪಿ-2 ನ್ನು ಜರುಗಿಸಲು ಪೊಲೀಸರು ನನಗೆ  ನೋಟಿಸು ಜಾರಿಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಸಮಯಕ್ಕೆ ನಾನು ಆಸ್ಪತ್ರೆಯಲ್ಲಿದ್ದೆ. ಸದರಿ ನೋಟಿಸನ್ನು ನನಗೆ ಯಾವ ಸಮಯದಲ್ಲಿ ಜಾರಿಮಾಡಿದ್ದರು ಎಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ.  ನಿಪಿ-2ರಲ್ಲಿನ ವಿಚಾರ ನನಗೆ ಖುದ್ದಾಗಿ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸದರಿ ನಿಪಿ-2 ನ್ನು ಯಾರು ಯಾವ ಸಮಯದಲ್ಲಿ ಬರೆದರು  ಎಂದರೆ ಸಾಕ್ಷಿ ಅದನ್ನು ಪೊಲೀಸರು ಬರೆದಿದ್ದು ನನಗೆ ಸಮಯ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-2ರ ಸಮಯಕ್ಕೆ ನನ್ನೊಂದಿಗೆ 5-6 ಜನ ಹಾಜರಿದ್ದರು. ಸದರಿ ನಿಪಿ-2 ಕ್ಕೆ ನನ್ನೊಂದಿಗೆ 5-6 ಜನ ಸಹಿ ಮಾಡಿರುತ್ತಾರೆ. ನಿಪಿ-2ರ ಚೆಕ್ಕುಬಂದಿ ನನಗೆ ಹೇಳಲಾಗುವುದಿಲ್ಲ. ಹಾಗಾಗಿ ನಿಪಿ-2 ನ್ನು ಠಾಣೆಯಲ್ಲಿ ಸೃಷ್ಟಿ ಮಾಡಿದ್ದು ಅದಕ್ಕೆ ನಾನು ಸಹಿಯನ್ನು ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ನಿಪಿ-2ರ ಕುರಿತು ಯಾವುದೇವ ೂಹಿತಿ ಇಲ್ಲದೆ ಇದ್ದರು ಸಹ ನಾನು ಪೊಲೀಸರ ಇರಾದೆ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಕಡತದಲ್ಲಿನ ಕಚ್ಚಾ ನಕಾಶೆಯಲ್ಲಿ ತೋರಿಸಿದಂತೆ ಅಪಘಾತವಾದ ಸ್ಥಳವನ್ನು ಗಮನಿಸಿದಾಗ ನಮ್ಮ ತಪ್ಪಿನಿಂದಲೇ ಸದರಿ ಅಪಘಾತ ಸಂಭವಿಸಿದೆ ಎಂದರೆ ಸರಿಯಲ್ಲ. ನಾನು ಸದರಿ ಅಪಘಾತದಿಂದ ಪರಿಹಾರವನ್ನು ಪಡೆಯುವ ಉದ್ದೇಶದಿಂದ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗಾಗಿ ನಾನು ಕೊಟ್ಟ ದೂರಿಗೂ 2 ನೇ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಸದರಿ ಟ್ರಾಕ್ಟರ್ ನಲ್ಲಿ ಅಡಿಕೆ ಇತ್ತು. ನಿಪಿ-4 ಮತುತ 5 ರಲ್ಲಿ ಕಾಣಿಸುತ್ತಿರುವ ಟ್ರಾಕ್ಟರ್ ನಲ್ಲಿ ಅಡಿಕೆ ಇಲ್ಲ ಎಂದರೆ ಸರಿಯಲ್ಲ. ಸದರಿ ನಿಪಿ-3 ನ್ನು ಯಾವ ದಿನಾಂಕದಂದು ಜರುಗಿಸಿದರು  ಎಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ನಿಪಿ-3 ರ ಸಮಯಕ್ಕೆ ನನ್ನೊಂದಿಗೆ 5-6  ಜನ ಹಾಜರಿದ್ದರು. ನಿಪಿ-3 ನ್ನು ಜರುಗಿಸಲು ಪೊಲೀಸರು ನನಗೆ ನೋಟಿಸನ್ನು ಜಾರಿಮಾಡಿರುತ್ತಾರೆ. ಸದರಿಯವರು ಹೆಸರು ನನಗೆ ಹೇಳಲಾಗುವುದಿಲ್ಲ. ನಿಪಿ-3ರಲ್ಲಿ ಬರೆದ

ವಿವರ ನನಗೆ ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ನನಗೆ ನಿಪಿ-3 ರ ಕುರಿತು ಯಾವುದೇ ಮಾಹಿತಿ ಇಲ್ಲದೆ ಇದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-3ರ ಚೆಕ್ಕಬಂದಿ ನನಗೆ ಹೇಳಲಾಗುವುದಿಲ್ಲ. ನಿಪಿ-3ನ್ನು ಬರೆದ ನಿರ್ದಿಪಃ್ತ ಸಮಯ ಮತ್ತು ಯಾರು ಯಾವ ಮಯದಲ್ಲಿ ಬರೆದರು ಎಂದರೆ ಸಾಕ್ಷಿ 10.00 ರಿಂದ 1.00 ರವರೆಗೂ ಬರೆದಿರುತ್ತಾರೆ ಎಂದು ನುಡಿಯುತ್ತಾರೆ.

ನನಗೆ ಈ ಪ್ರಕರಣದ ಕುರಿತು ಯಾವುದೇ ಮಾಹಿತಿ ಇಲ್ಲದೆ ಇದ್ದರು ಸಹ ಸುಳ್ಳು ಸಾಕ್ಷ್ಯಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ಸದರಿ ಟ್ರಾಕ್ಟರ್ ಗೂ 2 ನೇ ಆರೋಪಿಗೂ ಯಾವುದೇ ಸಂಬಧವಿಲ್ಲ ಎಂದರೆ ಸರಿಯಲ್ಲ.ನಾನು ವಿಮಾ ಕಂಪನಿಯಿಂದ ಪರಿಹಾರ ಪಡೆಯುವ ಉದ್ದೇಶದಿಂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**